ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2021

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–21 ಸಂಚಿಕೆ–2 ಪುಟಗಳು–6 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಕುಂದಾಪುರ ಸಂಘದ ವಾರ್ಷಿಕೋತ್ಸವ



ತಾರೀಕು 07.02.2021 ರಂದು ಶಂಕರನಾರಾಯಣದ ಬಳಿಯ ಕಾರೆಬೈಲು ಗ್ರಾಮದ ಶ್ರೀ ಶಂಕರ್ ರಾವ್ ಇವರ ನಿವಾಸದಲ್ಲಿ ಕುಂದಾಪುರ ಸಂಘದ ವಾರ್ಷಿಕೋತ್ಸವ ನೆರವೇರಿತು. ಬೆಳಿಗ್ಗೆ ಉಪಹಾರದೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮದಲ್ಲಿ ಮಹಿಳಾ ವೇದಿಕೆಯಿಂದ ಲಲಿತ ಕಲಾ ವೈಭವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ ಹಿರಿಯರಿಗೆ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳು ಕಾರೆಬೈಲು ಚಂದ್ರಶೇಖರ ರಾವ್ ವೇದಿಕೆಯಲ್ಲಿ ಜರುಗಿದವು. ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಸತ್ಯನಾರಾಯಣ ಹೆಬ್ಬಾರ್ ಉಡುಪಿಯ ಕುಟುಂಬ ಕಲ್ಯಾಣ ಅಧಿಕಾರಿ ಡಾಕ್ಟರ್ ರಾಮರಾವ್ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್ ಕುಂದಾಪುರ ಸಂಘದ ಗೌರವಾಧ್ಯಕ್ಷರಾದ ಶ್ರೀಕೃಷ್ಣ ಗೋಪಾಲ ಹೆಬ್ಬಾರ್ ಮಹಿಳಾ ವೇದಿಕೆ ಅಧ್ಯಕ್ಷೆಯಾದ ಶ್ರೀಮತಿ ಪುಷ್ಪಲತಾ ಶಾನುಭಾಗ್ ಹಾಗೂ ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಹೀರಣ್ಣಯ್ಯರವರು ಉಪಸ್ಥಿತರಿದ್ದರು. ಸಭೆಯಲ್ಲಿ ಶ್ರೀ ವೆಂಕಟೇಶ ಹೆಬ್ಬಾರ್, ಶ್ರೀ ದಯಾನಂದ ರಾವ್ ಬೈಂದೂರು ಹಾಗೂ ಶ್ರೀಮತಿ ರತ್ನಮ್ಮ ಕುಂದೇಶ್ವರ ಇವರನ್ನು ಸನ್ಮಾನಿಸಲಾಯಿತು. ಕುಂದಾಪುರ ವ್ಯಾಪ್ತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಉಮೇಶ್ ಶಾನುಭಾಗ್ ಕಾರ್ಯದರ್ಶಿಗಳಾದ ಶ್ರೀ ಸುಭಾಸ್‌ಚಂದ್ರ ಹಾಗೂ ಕೋಶಾಧಿಕಾರಿಗಳಾದ ಶ್ರೀ ಅರುಣ ಶಾನುಭಾಗ್‌ರವರು ಉಪಸ್ಥಿತರಿದ್ದರು. ಭೋಜನದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು. ಕಾರ್ಯಕ್ರಮವನ್ನು ಶ್ರೀ ಶಂಕರ್ ರಾವ್ ದಂಪತಿಗಳು ಪ್ರಾಯೋಜಿಸಿದ್ದರು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಮಹಾಶಿವರಾತ್ರಿಯ ಆಮಂತ್ರಣ



ಭಕ್ತಾಭಿಮಾನಿಗಳೇ,

ತಾ.11-03-2021, ಗುರುವಾರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ ನಡೆಯಲಿದೆ.

ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

–ಆಡಳಿತ ಮಂಡಳಿ

ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551



ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ಶಾರ್ವರಿ ನಾಮ ಸಂ|ರದ ಮೀನ ಸಂಕ್ರಮಣ ತಾ.14-03-2021ನೇ ಆದಿತ್ಯವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

–ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

## ಯುವ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ ದಿನಾಂಕ 21-03-2021ನೇ ರವಿವಾರದಂದು ಬೆಳಿಗ್ಗೆ 9-30ಕ್ಕೆ ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2021ನ್ನು**

ಏರ್ಪಡಿಸಲಾಗಿದೆ.

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯನಾಗರಿಕರಿಗೂ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

ಆಸಕ್ತ ತಂಡಗಳು ಸಂಘದ ಕಾರ್ಯದರ್ಶಿ ಶ್ರೀ ಯು.ಅರವಿಂದ ಕುಮಾರ್ (9343560647), ಯುವವೇದಿಕೆಯ ಅಧ್ಯಕ್ಷರಾದ ಡಾ. ಸಂತೋಷ್ ರಾವ್ (9900411040), ಮೆನೇಜರ್ ಶ್ರೀ ಅಜಿತ್ ರಾವ್ (9448108920) ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 15-03-2021ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

## ಮಹಿಳಾ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ತಾ.21-03-2021ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು**

ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ


– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಪರ್ವಕಾಲ ಮಹಾಶಿವ ರಾತ್ರಿ

ಲೇಖನ : ವೈ.ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.

**ಶ್ರೀ ಶಿವ ಪಂಚಾಕ್ಷರ ಸ್ತೋತ್ರಮ್ :**

*ನಾಗೇಂದ್ರಹಾರಾಯ ತ್ರಿಲೋಚನಾಯ*
*ಭಸ್ಮಾಂಗರಾಗಾಯ ಮಹೇಶ್ವರಾಯ ।*
*ನಿತ್ಯಾಯ ಶುದ್ಧಾಯ ದಿಗಂಬರಾಯ*
*ತಸ್ಮೈ ‘ನ’ ಕಾರಾಯ ನಮಃ ಶಿವಾಯ ।೧।*




ಸರ್ಪರಾಜನಾದ ವಾಸುಕಿಯನ್ನು ಕೊರಳಲ್ಲಿ ಧರಿಸಿರುವ, ಮುಕ್ಕಣ್ಣನಾದ, ಭಸ್ಮವನ್ನು ದೇಹಕ್ಕೆ ಹಚ್ಚಿಕೊಂಡಿರುವ, ಮಹೇಶ್ವರನೂ, ನಿತ್ಯನೂ, ಪರಿಶುದ್ಧನೂ, ದಿಗಂಬರನೂ ಆಗಿ, ‘ನಮಃ ಶಿವಾಯ’ ಎಂಬ ಪಂಚಾಕ್ಷರೀ ಮಂತ್ರದ ಮೊದಲ ಅಕ್ಷರವಾದ ‘ನ’ ಎಂಬ ಅಕ್ಷರ ಸ್ವರೂಪನಾದ ಈಶ್ವರನಿಗೆ ನಮಸ್ಕಾರಗಳು.

*ಮಂದಾಕಿನೀ ಸಲಿಲ ಚಂದನ ಚರ್ಚಿತಾಯ*
*ನಂದೀಶ್ವರ ಪ್ರಮಥನಾಥ ಮಹೇಶ್ವರಾಯ ।*
*ಮಂದಾರ ಪುಷ್ಪ ಬಹುಪುಷ್ಪ ಸುಪೂಜಿತಾಯ*
*ತಸ್ಮೈ ‘ಮ’ ಕಾರಾಯ ನಮಃ ಶಿವಾಯ ।೨।*

ಗಂಗಾನದಿಯಿಂದ ಸದಾ ಅಭಿಷಿಂಚಿತನಾಗುವ ಮತ್ತು ತೇಯ್ದ ಚಂದನದಿಂದ ಲೇಪಿತನಾದ, ನಂದಿ ಮೊದಲಾದ ಗಣಗಳ ಒಡೆಯನು, ಮಂದಾರ ಮುಂತಾದ ಪರಿಮಳ ಪುಷ್ಪಗಳಿಂದ ಪೂಜಿತನಾಗುವ, ‘ಮ’ ಎಂಬ ಎರಡನೇ ಅಕ್ಷರ ಸ್ವರೂಪನಾದ ಶಿವನಿಗೆ ನಮಸ್ಕಾರಗಳು.

*ಶಿವಾಯ ಗೌರೀವದನಾಬ್ಜವೃಂದ*
*ಸೂರ್ಯಾನು ದಕ್ಷಾಧ್ವರನಾಶಕಾಯ ।*
*ಶ್ರೀ ನೀಲಕಂಠಾಯ ವೃಷಧ್ವಜಾಯ*
*ತಸ್ಮೈ ‘ಶಿ’ ಕಾರಾಯ ನಮಃ ಶಿವಾಯ ।೩।*

ಶುಭಂಕರನಾದ, ಸೂರ್ಯನು ಉದಯಿಸಿದರೆ ಕಮಲಗಳು ವಿಕಸಿಸುವಂತೆ, ಪಾರ್ವತಿಯ ಮುಖಾರವಿಂದವನ್ನು ಹಸನ್ಮುಖಿಯಾಗಿ ಮಾಡುವ, ದರ್ಪಿಷ್ಟನಾದ ದಕ್ಷನ ಯಾಗವನ್ನು ಧ್ವಂಸ ಮಾಡಿದ, ಶೋಭಾಯಮಾನವಾದ ನೀಲಿ ಬಣ್ಣದ ಕುತ್ತಿಗೆಯಿರುವ, ವೃಷಭದ ಆಕೃತಿಯನ್ನು ತನ್ನ ಧ್ವಜವಾಗಿಟ್ಟುಕೊಂಡಿರುವ ‘ಶಿ’ ಎಂಬ ಅಕ್ಷರ ಸ್ವರೂಪನಾದ ಶಿವನಿಗೆ ನಮಸ್ಕಾರಗಳು.

*ವಸಿಷ್ಠ ಕುಂಭೋದ್ಭವ ಗೌತಮಾರ್ಯ*
*ಮುನೀಂದ್ರ ದೇವಾರ್ಚಿತ ಶೇಖರಾಯ ।*
*ಚಂದ್ರಾರ್ಕವೈಶ್ವಾನರ ಲೋಚನಾಯ*
*ತಸ್ಮೈ ‘ವ’ ಕಾರಾಯ ನಮಃ ಶಿವಾಯ ॥೪॥*

ಆರ್ಯರೂ ಶ್ರೇಷ್ಠ ಮುನಿಗಳೂ ಆದ ವಸಿಷ್ಠ, ಅಗಸ್ತ್ಯ, ಗೌತಮ ಮೊದಲಾದ ಋಷಿಗಳಿಂದ ಮತ್ತು ಇಂದ್ರಾದಿ ದೇವತೆಗಳಿಂದ ಅರ್ಚಿಸಲ್ಪಟ್ಟ ಶಿರಸ್ಸಿರುವ, ಚಂದ್ರ, ಸೂರ್ಯ ಮತ್ತು ಅಗ್ನಿಯನ್ನು ಮೂರು ಕಣ್ಣುಗಳನ್ನಾಗಿಸಿಕೊಂಡಿರುವ ‘ವ’ ಎಂಬ ಅಕ್ಷರ ಸ್ವರೂಪನಾದ ಶಿವನಿಗೆ ನಮಸ್ಕಾರಗಳು.

*ಯಕ್ಷಸ್ವರೂಪಾಯ ಜಟಾಧರಾಯ*
*ಪಿನಾಕಹಸ್ತಾಯ ಸನಾತನಾಯ।*
*ದಿವ್ಯಾಯ ದೇವಾಯ ದಿಗಂಬರರಾಯ*
*ತಸ್ಮೈ ‘ಯ’ ಕಾರಾಯ ನಮಃ ಶಿವಾಯ ॥೫॥*

ಯಕ್ಷ ಸ್ವರೂಪನಾಗಿ ಅದೃಷ್ಯನಾಗಿರುವ, ತಲೆಕೂದಲನ್ನು ಜಟೆಯಾಗಿ ಹೆಣೆದುಕೊಂಡಿರುವ, ಪಿನಾಕವೆಂಬ ಬಿಲ್ಲನ್ನು ಹಿಡಿದಿರುವ, ಶಾಶ್ವತನಾದ, ಸುಂದರನಾದ, ಕಾಂತಿವಂತನಾದ ದಿಗಂಬರನಾಗಿರುವ ‘ನಮಃ ಶಿವಾಯ’ ಎಂಬ ಮೂಲ ಮಂತ್ರದ ‘ಯ’ ಎಂಬ ಅಕ್ಷರ ಸ್ವರೂಪನಾದ ಶಿವನಿಗೆ ನಮಸ್ಕಾರಗಳು.

*ಪಂಚಾಕ್ಷರಮಿದಂ ಪುಣ್ಯಂ ಯಃ ಪಠೇತ್ ಶಿವಸನ್ನಿಧೌ*
*ಶಿವಲೋಕಮವಾಪ್ನೋತಿ ಶಿವೇನ ಸಹ ಮೋದತೇ॥*

ಪುಣ್ಯವನ್ನು ಕೊಡುವ ಈ ಪಂಚಾಕ್ಷರ ಸ್ತೋತ್ರವನ್ನು, ಶಿವನ ಸಾನಿಧ್ಯದಲ್ಲಿ, ನಿತ್ಯವೂ ಪಠಿಸುವರೋ, ಅವರು ಶಿವಲೋಕವನ್ನು ಹೊಂದಿ, ಶಿವನೊಂದಿಗೆ ಆನಂದಿಸುತ್ತಾರೆ,

**ಲಿಂಗಾಷ್ಟಕಮ್ :**

*ಬ್ರಹ್ಮಮುರಾರಿ ಸುರಾರ್ಚಿತ ಲಿಂಗಂ*
*ನಿರ್ಮಲಭಾಸಿತ ಶೋಭಿತ ಲಿಂಗಂ ।*
*ಜನ್ಮಜ ದುಃಖವಿನಾಶಕ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೧॥*



ಮುರನನ್ನ ಸಂಹರಿಸಿದ ವಿಷ್ಣು, ಬ್ರಹ್ಮ ಹಾಗೂ ದೇವತೆಗಳಿಂದ ಅರ್ಚಿತನಾದ, ನಿರ್ಮಲವಾಗಿ, ಸುಂದರವಾಗಿ ಶೋಭಿಸುತ್ತಿರುವ, ಜನ್ಮದಿಂದ ಉಂಟಾದ ದುಃಖಗಳನ್ನು ಕಳೆಯುವ, ಸದಾ ಮಂಗಳವನ್ನುಂಟು




ಮಾಡುವ ಲಿಂಗರೂಪಿಯಾದ ಶಿವನನ್ನು ನಾನು ವಂದಿಸುತ್ತೇನೆ.

*ದೇವ ಮುನಿಪ್ರವರಾರ್ಚಿತ ಲಿಂಗಂ*
*ಕಾಮದಹನ ಕರುಣಾಕರ ಲಿಂಗಂ ।*
*ರಾವಣದರ್ಪವಿನಾಶನ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೨॥*

ಶ್ರೇಷ್ಠ ದೇವರ್ಷಿಗಳಾದ ನಾರದರೇ ಮೊದಲಾದವರಿಂದ ಅರ್ಚಿಸಲ್ಪಟ್ಟ, ಮನ್ಮಥನನ್ನು ಸುಟ್ಟು ಹಾಕಿದ, ದಯಾಕರನಾದ, ರಾವಣನ ಅಹಂಕಾರವನ್ನು ನಾಶಮಾಡಿದ ಸದಾಶಿವ ಲಿಂಗವನ್ನು ನಮಿಸುತ್ತೇನೆ.

*ಸರ್ವ ಸುಗಂಧಿ ಸುಲೇಪಿತ ಲಿಂಗಂ*
*ಬುದ್ಧಿ ವಿವರ್ಧನ ಕಾರಣ ಲಿಂಗಂ ।*
*ಸಿದ್ಧಸುರಾಸುರ ವಂದಿತ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೩॥*

ಸುಗಂಧದಿಂದ ಎಲ್ಲಾ ಕಡೆ ಲೇಪಿತಗೊಂಡ, ಬುದ್ಧಿಯ ಬೆಳವಣಿಗೆಯನ್ನುಂಟು ಮಾಡುವ, ಸಿದ್ಧರು, ದೇವತೆಗಳು, ಅಸುರರು ಇವರಿಂದ ಪೂಜಿತನಾದ ಸದಾಶಿವ ಲಿಂಗವನ್ನು ನಾನು ವಂದಿಸುತ್ತೇನೆ.

*ಕನಕ ಮಹಾಮಣಿ ಭೂಷಿತ ಲಿಂಗಂ*
*ಫಣಿಪತಿ ವೇಷ್ಟಿತ ಶೋಭಿತ ಲಿಂಗಂ ।*
*ದಕ್ಷಸುಯಜ್ಞ ವಿನಾಶನ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೪॥*

ಸುವರ್ಣಮಯವಾದ ರತ್ನಾಭರಣಗಳಿಂದ ಅಲಂಕೃತವಾದ, ನಾಗರಾಜನು ಸುತ್ತಿಕೊಂಡು ಶೋಭಿಸುತ್ತಿರುವ, ದಕ್ಷನ ಯಜ್ಞವನ್ನು ವಿನಾಶಗೈದ, ಸದಾಶಿವ ಲಿಂಗವನ್ನು ನಾನು ನಮಿಸುತ್ತೇನೆ.

*ಕುಂಕುಮ ಚಂದನ ಲೇಪಿತ ಲಿಂಗಂ*
*ಪಂಕಜಹಾರ ಸುಶೋಭಿತ ಲಿಂಗಂ ।*
*ಸಂಚಿತಪಾಪ ವಿನಾಶನ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೫॥*

ಕುಂಕುಮ ಮತ್ತು ಚಂದನದಿಂದ ಲೇಪಿತನಾದ, ಕಮಲದ ಹಾರದಿಂದ ಶೋಭಿಸುತ್ತಿರುವ, ಸಂಚಿತ ಪಾಪವನ್ನು ನಾಶ ಮಾಡುವ, ಸದಾಶಿವ ಲಿಂಗವನ್ನು ನಾನು ವಂದಿಸುತ್ತೇನೆ.

*ದೇವಗಣಾರ್ಚಿತ ಸೇವಿತ ಲಿಂಗಂ*
*ಭಾವೈರ್ಭಕ್ತಿಭಿರೇವ ಚ ಲಿಂಗಂ ।*
*ದಿನಕರ ಕೋಟಿ ಪ್ರಭಾಕರ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೬॥*

ದೇವಗಣಗಳು ಭಕ್ತಿಯಿಂದ ಅರ್ಚಿಸಿ, ಪೂಜಿಸುವ, ಕೋಟಿಸೂರ್ಯ ಪ್ರಕಾಶಮಯವಾದ, ಸದಾಶಿವ ಲಿಂಗವನ್ನು ನಮಸ್ಕರಿಸುತ್ತೇನೆ.

*ಅಷ್ಟದಲೋಪರಿ ವೇಷ್ಟಿತ ಲಿಂಗಂ*
*ಸರ್ವಸಮುದ್ಭವ ಕಾರಣ ಲಿಂಗಂ ।*
*ಅಷ್ಟದರಿದ್ರವಿನಾಶನ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೭॥*

ಅಷ್ಟದಳದ ಪದ್ಮಗಳಿಂದ ಆವೃತವಾದ, ಸಮಸ್ತ ಸೃಷ್ಟಿಯು ಉದ್ಭವಿಸಲು ಕಾರಣನಾದ, ಅಷ್ಟದಾರಿದ್ರ್ಯವನ್ನು ಹೋಗಲಾಡಿಸುವ ಸದಾಶಿವ ಲಿಂಗವನ್ನು ನಮಸ್ಕರಿಸುತ್ತೇನೆ.

*ಸುರಗುರು ಸುರವರ ಪೂಜಿತ ಲಿಂಗಂ*
*ಸುರವನ ಪುಷ್ಪ ಸದಾರ್ಚಿತ ಲಿಂಗಂ ।*
*ಪರಮಪದಂ ಪರಮಾತ್ಮಕ ಲಿಂಗಂ*
*ತತ್ ಪ್ರಣಮಾಮಿ ಸದಾಶಿವ ಲಿಂಗಮ್ ॥೮॥*

ಬೃಹಸ್ಪತಿ, ದೇವೇಂದ್ರರು ಪೂಜಿಸುವ, ನಂದನ ವನದ ಹೂಗಳಿಂದ ಸದಾ ಅರ್ಚಿತವಾದ, ಪರಮಪದವೂ ಪರಮಾತ್ಮನೂ ಆದ, ಸದಾಶಿವ ಲಿಂಗವನ್ನು ನಾನು ವಂದಿಸುತ್ತೇನೆ.

*ಲಿಂಗಾಷ್ಟಕಮಿದಂ ಪುಣ್ಯಂ ಯಃ ಪಠೇತ್ ಶಿವಸನ್ನಿಧೌ ।*
*ಶಿವಲೋಕ ಮವಾಪ್ನೋತಿ ಶಿವೇನ ಸಹ ಮೋದತೇ॥*

ಪಾವನಕರವಾದ ಈ ಲಿಂಗಾಷ್ಟಕ ಸ್ತೋತ್ರವನ್ನು ಯಾರು ಶಿವಸನ್ನಿಧಿಯಲ್ಲಿ ಪಠಿಸುತ್ತಾರೋ, ಅವರು ಶಿವಲೋಕವನ್ನು ಸೇರಿ ಶಿವನೊಂದಿಗೆ ಆನಂದಿಸುತ್ತಾರೆ.

ಸಚ್ಚಿದಾನಂದ ಸ್ವರೂಪನಾದ ಈ ಸದಾಶಿವನ ಮೂರ್ತಿ ಕಲ್ಪನೆಯೇ ಅತಿ ವಿಶಿಷ್ಟವಾದುದು. ಮಸ್ತಕದಲ್ಲಿ ಮಂದಾಕಿನೀ (ನೀರು) ಹಣೆಯಲ್ಲಿ ಉರಿಗಣ್ಣು (ಬೆಂಕಿ) ಕೊರಳಲ್ಲಿ ಹಾವು (ವಿಷ) ಮುಡಿಯಲ್ಲಿ ಚಂದ್ರಕಲೆ (ಅಮೃತ) ಜಾತಿವೈರವುಳ್ಳ

(3ನೇ ಪುಟಕ್ಕೆ...)

With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI

ಹುಲಿಆನೆಗಳ ತೊಗಲೇ ಈ ದಿಗಂಬರನಿಗೆ ಅಂಬರ. ಮಸಣವೇ ಮನೆ. ಪ್ರಮಥಾದಿ ಭೂತವ್ರಾತವೇ ಭೃತ್ಯರು. ಲಾಸ್ಯತಾಂಡವಗಳೆಂಬಂತೆ ಇಬ್ಬಗೆಯಿಂದ ನರ್ತಿಸುವ ತನ್ನ ಅರೆಮೈಯನ್ನು ತನ್ನ ಮಡದಿಗೆ ಬಿಟ್ಟುಕೊಟ್ಟ ಈ ನಟರಾಜನಿಗೆ ತನ್ನ ಕೈಯಲ್ಲಿರುವ ಡಮರುವೇ ವಾದ್ಯ. ವಾದಕನೂ ಅವನೇ. ನರ್ತಕನೂ ಅವನೇ. ನಾಟ್ಯವೂ ಅವನೇ. ಸರ್ವಂ ಶಿವಮಯಂ ಜಗತ್. ನಾದತನುಮನಿಶಂ ಶಂಕರಂ ಎಂದು ಗಾಯಕರು ಕೀರ್ತಿಸಿದ್ದು ಈ ಶಿವತತ್ವವನ್ನೇ. ವೇದಃ ಶಿವಃ ಶಿವೋ ವೇದಃ ಎಂಬುದು ಶಾಸದ ಮಾತು......

ರುಕ್ಷರೂ ಯಕ್ಷರಾಜನಾದ ಕುಬೇರನೂ ಶಿವಾರಾಧಕರು, ಗಂಧರ್ವರು ಗಾನದಿಂದ ವಾದನದಿಂದ ಈಶನ ಒಲುಮೆಯನ್ನು ಪಡೆದಂತೆ ಯಕ್ಷರು ಗಾನದಿಂದಲೂ, ನಾಟ್ಯದಿಂದಲೂ ನಟರಾಜನಾದ ಶಿವನ ಒಲುಮೆಯನ್ನು ಸಂಪಾದಿಸಿದರು. ಸಾತ್ವಿಕ–ಆಂಗಿಕ–ವಾಚಿಕ–ಆಹಾರ್ಯಗಳೆಂಬ ಚತುರ್ವಿಧಾಭಿನಯದ ಆರಾಧನೆಯಿಂದ ಶಿವನನ್ನು ಸಮರ್ಚಿಸಿದ ಯಕ್ಷರು ನಾದಮೂರ್ತಿಯಾದ ನಟರಾಜನ ಅನುಗ್ರಹಕ್ಕೆ ಪಾತ್ರರಾದರು. ಹಾಗಾಗಿಯೇ ನಮ್ಮಲ್ಲಿ ಪೂರ್ವದಿಂದಲೂ ಯಕ್ಷಗಾನವೊಂದು ಆರಾಧನಾ ಕಲೆಯಾಗಿ ಭಗವತ್ ಸೇವಾರೂಪದಲ್ಲಿ ದೇವರಿಗೊಪ್ಪಿಸುವ ಹರಕೆಯಾಗಿ ನಡೆದುಕೊಂಡು ಬಂದಿದೆ. ಮೇಳ ಹೊರಡುವುದು ತಿರುಗಾಟ ಮುಕ್ತಾಯವಾಗುವುದು ದೇವರ ಸೇವೆಯೊಂದಲೇ. ಇದೊಂದು ಸಮೂಹಾರ್ಚನೆ.

ಸಾಮಾನ್ಯವಾಗಿ ಶಿವಪಾರಮ್ಯವನ್ನು ಪ್ರತಿನಿಧಿಸುವ ಕೆಲ ಪ್ರಸಂಗಗಳನ್ನು ಇಲ್ಲಿ ಪಟ್ಟಿ ಮಾಡಿದ್ದೇನೆ. ಇದು ಪರಿಪೂರ್ಣವಲ್ಲ. ಪ್ರಸಂಗದ ಕೊನೆಗಷ್ಟೇ ಪ್ರತ್ಯಕ್ಷನಾಗಿ ಅನುಗ್ರಹಿಸುವ ಶಿವನ ಸನ್ನಿವೇಶವುಳ್ಳ ಹರಿಶ್ಚಂದ್ರ, ಕೃಷ್ಣಾರ್ಜುನ ಮುಂತಾದ ಪ್ರಸಂಗಗಳನ್ನು ಈ ಪಟ್ಟಿಯಲ್ಲಿ ಗಣಿಸಿಲ್ಲ.

1. ಕೇತಕೀ ಶಾಪ 2. ಬ್ರಹ್ಮಕಪಾಲ 3. ದಕ್ಷಾಧ್ವರ–ಗಿರಿಜಾಕಲ್ಯಾಣ 4. ಭದ್ರಾಯು ಚರಿತ್ರೆ 5. ಶೂರ ಪದ್ಮಾಸುರ ಕಾಳಗ 6. ಅಂಧಕಾಸುರ ಕಾಳಗ 7. ಬಾಣಾಸುರ ಕಾಳಗ 8. ನಾಗಾಸ್ತ್ರ ಕುಂಭಕರ್ಣ ಕಾಳಗ 9. ವೀರಮಣಿ ಕಾಳಗ 10. ಮಾರ್ಕಂಡೇಯ ಚರಿತ್ರೆ 11. ಶ್ವೇತಕುಮಾರ ಚರಿತ್ರೆ 12. ತ್ರಿಪುರ ಮಥನ 13. ಯೋಗಿನೀ ಕಲ್ಯಾಣ 14. ಮೀನಾಕ್ಷೀ ಕಲ್ಯಾಣ 15. ಭೂ ಕೈಲಾಸ 16. ಭಸ್ಮಾಸುರ ಮೋಹಿನೀ 17. ಶಿವ ಲೀಲಾರ್ಣವ 18. ಇಂದ್ರ ಕೀಲಕ 19. ಭೀಮ ಭಕ್ತಿ 20. ಗಣಪತಿ ವಿಜಯ 21. ಲಲಿತೋಪಾಖ್ಯಾನ 22. ರಂಭಾ ರೂಪ ರೇಖಾ 23. ತುಳಸೀ ಜಲಂಧರ 24. ರಾಮೇಶ್ವರ ಮಹಾತ್ಮ್ಯೆ 25. ಕಾವೇರಿ ಮಹಾತ್ಮ್ಯೆ 26. ಧರ್ಮಸ್ಥಳ ಕ್ಷೇತ್ರ ಮಹಾತ್ಮ್ಯೆ 27. ಕದ್ರಿ ಕ್ಷೇತ್ರ ಮಹಾತ್ಮ್ಯೆ 28. ಗೋಕರ್ಣ ಕ್ಷೇತ್ರ ಮಹಾತ್ಮ್ಯೆ 29. ನಿಟಿಲಾಪುರ ಕ್ಷೇತ್ರ ಮಹಾತ್ಮ್ಯೆ (ಕೃಪೆ : ಅಕ್ಷರ ಯಕ್ಷಗಾನ, ಯಕ್ಷಗಾನ ಪ್ರಬಂಧಗಳು. ಯಕ್ಷಗಾನದಲ್ಲಿ ಶಿವ. ದ್ವಿವೇದೀ ವಿದ್ವಾನ್ ಕೊರ್ಗಿ ವೇಂಕಟೇಶ್ವರ ಉಪಾಧ್ಯಾಯ.)

ಇನ್ನು ಭಕ್ತನು ತನ್ನ ಮನಸ್ಸಿನಲ್ಲೇ ಭಗವಂತನ ಆರಾಧನೆ ಮಾಡುವ ಕಲ್ಪನೆಯ ಸಾಕಾರವನ್ನು ಆದಿಶಂಕರಾಚಾರ್ಯರು ರಚಿಸಿದ 'ಶಿವಮಾನಸ ಪೂಜಾ' ಸ್ತೋತ್ರದಲ್ಲಿ ಕಾಣಬಹುದು. ಉದಾಹರಣೆಗಾಗಿ, ಒಂದು ಸ್ತೋತ್ರದ ಪ್ರಕಾರ – ಹೇ, ಶಿವನೇ, ನಾನು ಎಂಬ ಆತ್ಮನು ನೀನೇ ಆಗಿರುವೆ. ನನ್ನ ಅಂತಃಕರಣವೇ ಪಾರ್ವತಿಯು. ಪಂಚಪ್ರಾಣಗಳು ನಿನ್ನ ಅನುಚರರು. ಈ ಶರೀರವೇ ನಿನ್ನ ಮನೆ. ನಾನು ಅನುಭವಿಸುವ ವಿಷಯ ಸುಖವು ನಿನ್ನ ಪೂಜೆ. ನಿದ್ರೆಯು ನಿನ್ನ ಸಮಾಧಿಸ್ಥಿತಿ. ನನ್ನ ಕಾಲುಗಳ ನಡಿಗೆಯೇ ಪ್ರದಕ್ಷಿಣೆ. ನನ್ನ ಎಲ್ಲ ಮಾತುಗಳು ನಿನ್ನ ಸ್ತುತಿಗಳು. ನಾನು ಮಾಡುವುದೆಲ್ಲವೂ ನಿನ್ನ ಆರಾಧನೆ.

ಶಿವನಿಗೆ ಆಡಂಬರದ ಭಕ್ತಿ ಅವಶ್ಯವಿಲ್ಲ. ಅಂತಃಸತ್ವದ ಅತಿ ಸರಳ ಭಕ್ತಿಯಿಂದ ಶಿವ ಸಂತೃಪ್ತನಾಗುತ್ತಾನೆ. ಬಾಹ್ಯವಾಗಿ ಲಿಂಗವು ಶಿಲಾಮಯವಾಗಿದ್ದರೂ ಅಂತರ್ಯದಲ್ಲಿ ಅಭಿಷೇಕ ಪ್ರಿಯನಾದ ಶಿವನ ಪ್ರತೀಕ. ಆದ್ದರಿಂದ ಶಿವರಾತ್ರಿ ಜಾಗರಣೆ ಮತ್ತು ಶಿವಲಿಂಗ ಪೂಜೆಯಿಂದ ಪರಮೇಶ್ವರನ ಸರ್ವರಿಗೂ ಜ್ಞಾನ ಸುಖ–ತೃಪ್ತಿಗಳನ್ನು ಕರುಣಿಸುವ ಪರ್ವಕಾಲ ಮಹಾಶಿವರಾತ್ರಿ.

ಒಮ್ಮೆ ಬ್ರಹ್ಮ ಮತ್ತು ಹರಿ ಇವರೊಳಗೆ ನಡೆದ ಚರ್ಚೆ ಮುಂದುವರಿದು ಜಂಜಾಟಕ್ಕೆ ಮಾರ್ಪಟ್ಟಾಗ ಸುಮನಸರು ಶಿವನನ್ನು ಪ್ರಾರ್ಥಿಸಿದಾಗ ಹರನು ಶಿಲಾಸ್ತಂಭದಂತೆ ಉಪಪ್ರಾಯನಾಗಿ ಪ್ರತ್ಯಕ್ಷನಾಗಿ ಎಲ್ಲರ ಭಯ ನಿವಾರಿಸಿದ. ಎಲ್ಲರ ದುಃಖವನ್ನು, ಭಯವನ್ನು ಹೋಗಲಾಡಿಸಿದ ಶಿವನ ಈ ಮಹಿಮೆಯ ಅನಂತರ 'ಮಹಾಶಿವರಾತ್ರಿ' ಲೋಕ ವಿಖ್ಯಾತವಾಯಿತು.

ಅಸಹಾಯಕ ಭಕ್ತನ ಭಕ್ತಿಯ ಸ್ಥಿತಿಯನ್ನು ಭಕ್ತಿ ಭಂಡಾರಿ ಬಸವಣ್ಣನವರ ವಚನವು ತಿಳಿಸುತ್ತದೆ.

*ಉಳ್ಳವರು ಶಿವಾಲಯವ ಮಾಡುವರು*
*ನಾನೇನ ಮಾಡಲಿ ಬಡವನಯ್ಯ*
*ನನ್ನ ಕಾಲೇ ಕಂಬವಯ್ಯ,*
*ನನ್ನ ದೇಹವೇ ದೇಗುಲವಯ್ಯ,*
*ನನ್ನ ಶಿರವೇ ಹೊನ್ನ ಕಲಶವಯ್ಯ*
*ಕೂಡಲ ಸಂಗಮದೇವ ಕೇಳಯ್ಯ,*
*ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ ॥*

ಶಿವನು ಭಕ್ತಿ ಪ್ರಿಯ, ಭಕ್ತ ಪ್ರಿಯ. ಅರ್ಪಿಸುವ ಎಂದು ಸುಗಂಧ ಕುಸುಮಗಳನ್ನು ಎಸೆದ ಜನರು ಮುಕ್ತಿಗೆ ಪಾತ್ರರಾಗುತ್ತಾರೆ. ಹೊಡೆಯುವೆ ಎಂದು ಕುಸುಮಗಳನ್ನು ಎಸೆದಾಗ ಕ್ಷಣಮಾತ್ರದಲ್ಲಿ ಮನ್ಮಥ ಭಸ್ಮವಾಗಿಬಿಟ್ಟ. ಅಂತರ್ಯದ ಭಕ್ತಿಯನ್ನು ಗುರುತಿಸಿ ಗ್ರಹಿಸುವ, ಬಾಹ್ಯ ಆಡಂಬರಗಳನ್ನು ಬಯಸದ ಶಿವನೇ ನನ್ನ ದೇವರು ಎಂದರು ಹಲವರು. ಶಿವಪ್ಪ ಕಾಯೋ ತಂದೆ, ಮೂರು ಲೋಕ ಸ್ವಾಮಿ ದೇವ ಎಂದು ತನ್ನ ಕಣ್ಣನ್ನೇ ಕಿತ್ತ ಬೇಡರ ಕಣ್ಣಪ್ಪ, ಶಿವಶಿವನೆಂದರೆ ಭಯವಿಲ್ಲ ಎಂದ ಭಕ್ತ ಅಂಬರೀಶ, ಕೋಳೂರು ಕೊಡಗೂಸು ತನ್ನ ಮುಗ್ಧ ಮನಸ್ಸಿನಿಂದ ಶಿವನಿಗೆ ಉಣಿಸುವ ಕಥೆ ಎಲ್ಲರಿಗೂ ಗೊತ್ತು.

ಹಂಸಲೇಖ ಅವರ ಚಲನಚಿತ್ರದ ಒಂದು ಭಕ್ತಿಗೀತೆ ಹೀಗಿದೆ.

*ನೀಡು ಶಿವಾ ನೀಡದಿರೂ ಶಿವಾ*
*ಬಾಗುವುದು ನನ್ನ ಕಾಯ*
*ನಾನೇಕೆ ಅಂಜಲಿ, ನಾ ನಿನ್ನ ಅಂಬಲಿ*

*ನೀನಿತ್ತ ಕಾಯ ನಿನ್ನ ಕೈಲೆ ಮಾಯ*
*ಆಗೋದು ಹೋಗೋದು ನಾ ಕಾಣೆನು*

*ಮಾಣಿಗೆ ಕೊಟ್ಟರು ಮರದಡಿಯೇ ಇಟ್ಟರು*
*ನಾನಂತು ನಿನ್ನನ್ನಲಾರೆ*

*ಸಾರಂಗ ಮನಕೆ ನೂರಾರು ಬಯಕೆ*
*ಮುಂದಿಟ್ಟು ಉಣಿಸೋರು ನಾ ಕಾಣೆನೆ*
*ನೀಡು ಶಿವಾ ನೀಡದಿರೂ ಶಿವಾ*
*ಬಾಗುವುದು ನನ್ನ ಕಾಯ*
*ನಾನೇಕೆ ಅಂಜಲಿ, ನಾ ನಿನ್ನ ಅಂಬಲಿ.*

**ಶಿವಾಯ ವಿಷ್ಣು ರೂಪಾಯ**
**ಶಿವರೂಪಾಯ ವಿಷ್ಣುವೇ।**
**ಶಿವಸ್ಯ ಹೃದಯಂ ವಿಷ್ಣು:**
**ವಿಷ್ಣೋಸ್ತು ಹೃದಯಂ ಶಿವ: ॥**

## ಶುಭ ವಿವಾಹ

ಕಟಪಾಡಿ ಮೂಡಬೆಟ್ಟು ಶ್ರೀ ಅಶೋಕ ರಾವ್ ಹಾಗೂ ಶ್ರೀಮತಿ ಎ.ರಾವ್ ಇವರ ಪುತ್ರಿ **ಅಶ್ವಿತಾ** ಹಾಗೂ ಕಬ್ಬಿನಾಲೆ ಶ್ರೀ ವಿಜಯಕುಮಾರ್ ಕೆ. ಹಾಗೂ ಶ್ರೀಮತಿ ವೀಣಾ ಇವರ ಪುತ್ರ **ಸುಪ್ರದೀಪ್** ಇವರ ವಿವಾಹವು ತಾ.23–12–2020ರಂದು ಉಡುಪಿ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

## ಒಗಟು

ಬದುಕೊಂದು ಲೆಕ್ಕಾಚಾರ,
ಬರಿಯ ವ್ಯವಹಾರ.
ಪಡೆದದ್ದೆಷ್ಟೋಕೊಟ್ಟಿದ್ದೆಷ್ಟೋ,
ತಾಳಮೇಳವಿಲ್ಲ.

ಬದುಕೊಂದು ಬಣ್ಣದ ಚಿಟ್ಟೆ
ಕೈಗೆ ಸಿಗುವುದಿಲ್ಲ.
ಸುಖವ ಹಿಡಿಯಲು ಓಡುತಲಿದ್ದರೆ,
ದುಃಖ ಬೆನ್ನ ಹಿಂದೆ.

ಬದುಕೊಂದು ಪಾಠಶಾಲೆ,
ಕಲಿಕೆಗೆ ಕೊನೆಯಿಲ್ಲ.
ಎದ್ದೂ ಬಿದ್ದೂ ನಡೆಯುವುದನ್ನು,
ನಾವೇ ಕಲಿಯಬೇಕು.

ಬದುಕೊಂದು ಕಣ್ಣಾಮುಚ್ಚಾಲೆ
ಆಟವಾಯಿತಲ್ಲಾ?
ಕಣ್ಣಿಗೆ ಕಂಡುದು ಮಿಥ್ಯವಂತೆ,
ಕಾಣದ ಲೋಕ ಸತ್ಯ!

–ರಾಜೇಶ್ವರಿ ರಾವ್

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4–30ರಿಂದ

**ತಾ.02-03-2021 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.07-03-2021 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.16-02-2021, ತಾ.03-03-2021 ಮತ್ತು ತಾ.18-03-2021 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಕುಂಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 12–02–2021 | ಕುಂಭ ಸಂಕ್ರಮಣ, ಶಿಶಿರ ಋತು, ಮಾಘಮಾಸದ ಶುಕ್ಲಪಕ್ಷಾರಂಭ, | 09–03–2021 | ಸರ್ವೈಕಾದಶಿ |
| 13–02–2021 | ಗುರುಮೌಢ್ಯಅಂತ್ಯ, ಗುರುಉದಯ | 11–03–2021 | ಮಹಾಶಿವರಾತ್ರಿ |
| 23–02–2021 | ಸರ್ವೈಕಾದಶಿ | 13–03–2021 | ಅಮಾವಾಸ್ಯೆ |
| 24–02–2021 | ಶುಕ್ರಾಸ್ತ–ಮೌಢ್ಯ ಆರಂಭ | 14–03–2021 | ಮೀನ ಸಂಕ್ರಮಣ, ಶಿಶಿರ ಋತು, ಫಾಲ್ಗುಣ ಮಾಸದ ಶುಕ್ಲಪಕ್ಷಾರಂಭ, ಕುಂಜಿಬೆಟ್ಟು ಶ್ರೀಶಾರದಾ ದೇವಿಯ ಪ್ರತಿಷ್ಠಾ ಮಹೋತ್ಸವ, |
| 27–02–2021 | ಹುಣ್ಣಿಮೆ | | |
| 28–02–2021 | ಶಿಶಿರ ಋತು, ಮಾಘ ಮಾಸದ ಕೃಷ್ಣಪಕ್ಷಾರಂಭ, | | |
| 02–03–2021 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.40 | 15–03–2021 | ಉಡುಪಿ ಶ್ರೀ ಅನಂತೇಶ್ವರ ದೇವರ ರಥೋತ್ಸವ |





SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE



**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination Z Spiral Binding Z Mobile & DTC Recharge Z Tours & Travels Z Courier Service Z Sports Items & Toys Z Ice Creams

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ನಿಧನ

### ವತ್ಸಲಾ ಟಿ.ಶಾನುಭಾಗ್



ಕುಮಟ ನಿವಾಸಿ ನಿವೃತ್ತ ಶಿಕ್ಷಕಿ ವತ್ಸಲಾ ಟಿ.ಶಾನುಭಾಗ್ ದಿನಾಂಕ 04.02.2021ರಂದು ಮುಂಬಯಿಯ ತನ್ನ ಮಗನ ಮನೆಯಲ್ಲಿ ನಿಧನ ಹೊಂದಿದರು.

**** ****

### ಪ್ರೇಮಾ ರಾವ್



ಮುಂಬಯಿ ನಿವಾಸಿ ದಿ। ಹೆಜಮಾಡಿ ಶ್ರೀನಿವಾಸ ರಾವ್ ಇವರ ಪುತ್ರಿ ಹಾಗೂ ದಿ। ನಂದಿಕೂರು ಶಿವರಾವ್ ಇವರ ಪತ್ನಿ ಶ್ರೀಮತಿ ಪ್ರೇಮಾ ರಾವ್ ತಾ.07.02.2021 ರಂದು ನಿಧನ ಹೊಂದಿದರು.

**** ****

### ಕಾಳಾವರ ಕೃಷ್ಣಮೂರ್ತಿ ರಾವ್

ಕಾಳಾವರ ಕೃಷ್ಣಮೂರ್ತಿ ರಾವ್ ಇವರು 13.01.2021ರಂದು ಧರ್ಮಾವರಂನಲ್ಲಿ ನಿಧನ ಹೊಂದಿದರು. ಇವರು ಧರ್ಮಾವರಂನಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿದ್ದರು.

**** ****

### ರಾಜೇಶ್ ರಾವ್

ಅದ್ಯಪಾಡಿ ರಾಜೇಶ್ ರಾವ್ ಇವರು 13–01–2021 ರಂದು ನಿಧನ ಹೊಂದಿದರು.

**** ****

### ಬಿ.ಸುಬ್ಬರಾವ್

ಪಡುಬಿದ್ರೆ ಬಿ.ಸುಬ್ಬರಾವ್ ಇವರ ಪತ್ನಿ ಜಾನಕಿ ಇವರು 27.01.2021 ರಂದು ನಿಧನ ಹೊಂದಿದರು.


**** ****

### ವೇದಮೂರ್ತಿ ಮಹೇಶ್

ವೇದಮೂರ್ತಿ ಮಹೇಶ್ ಇವರು ಮೂಡುಬಿದ್ರೆಯಲ್ಲಿ ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು.

**** ****

### ಸಾಂತೂರು ಶ್ರೀನಿವಾಸ ಶಾಸ್ತ್ರಿ



ಶ್ರೀ ಸಾಂತೂರು ಶ್ರೀನಿವಾಸ ಶಾಸ್ತ್ರಿ ಇವರು 29.01.2021ರಂದು ನಿಧನ ಹೊಂದಿದರು. ಇವರು ಶೃಂಗೇರಿ ಪೀಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ ಶ್ರೀ ವಾಗೀಶ ಶಾಸ್ತ್ರಿಯವರ ಸಹೋದರರು.

**** ****

### ಕದ್ರಿ ಶ್ರೀ ಸದಾನಂದ ರಾವ್

ಕದ್ರಿ ಶ್ರೀ ಸದಾನಂದ ರಾವ್ ಇವರು 21.01.2021 ರಂದು ನಿಧನ ಹೊಂದಿದರು.

**** ****

### ಎರ್ಮಾಳು ಸುರೇಶ್ ರಾವ್

ಬೆಂಗಳೂರು ನಿವಾಸಿ ಎರ್ಮಾಳು ಸುರೇಶ್ ರಾವ್ ಇವರು 09.01.2021 ರಂದು ನಿಧನ ಹೊಂದಿದರು.

**** ****

### ನಾರಾಯಣರಾವ್

ಆಕಿರೇಕಾಡು ನಾರಾಯಣರಾವ್ ಇವರು ಬೆಳ್ಳಾರೆ ಸುಳ್ಯದಲ್ಲಿ 19.01.2021 ರಂದು ನಿಧನ ಹೊಂದಿದರು.

**** ****

### ಕೋಲ್ಪೆ ಭಾಸ್ಕರ್ ರಾವ್

ಶ್ರೀ ಕೋಲ್ಪೆ ಭಾಸ್ಕರ್ ರಾವ್ ಇವರು 20.01.2021 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

**** ****

### ಶ್ರೀಮತಿ ಸರಸ್ವತಿ

ಶ್ರೀಮತಿ ಸರಸ್ವತಿ ವಳಕಾಡು ಗೋಪಾಲಕೃಷ್ಣ ರಾವ್ ಅವರ ಪತ್ನಿ 27.01.2021 ರಂದು ನಿಧನ ಹೊಂದಿದರು.

**** ****

### ಪ್ರಭಾವತಿ

ಪರೀಕ ರಾಮದಾಸ್ ಇವರ ಪತ್ನಿ ಪ್ರಭಾವತಿ 30.01.2021 ರಂದು ನಿಧನ ಹೊಂದಿದರು.


## ಚಿತ್ತ ಇಪ್ಪತ್ತು 20 ರಿಂದ ಇಪ್ಪತ್ತು 21 ರೆಡೆಗೆ

ಜಗತ್ತಿಗೆ ಮಾದರಿಯಾಗಿ ಭಾರತದ ಪ್ರಗತಿಗೆ ಮಾರಕವಾಗುವ ಚಿಂತನೆ ಹೊಂದಿದ ನಮ್ಮ ನಲ್ಮೆಯ ಪ್ರಧಾನಿಯವರ ನೇತೃತ್ವದಲ್ಲಿ ದೇಶದ ಯುವಪ್ರತಿಭೆಗಳು ನಿರಾಶರಾಗದೆ ಮುನ್ನಡೆಯುತ್ತಿರುವುದು ಸರ್ವವಿದಿತ. 'ಕೋವಿಡ್ 19' ಎಂಬ ಮಹಾ ಖಾಯಿಲೆಗೆ ದೇಶೀಯ ಕಂಪೆನಿಗಳ ಮೂಲಕ ಔಷಧ ತಯಾರಿಸಿ, ಜನತೆಗೆ ಹೆಚ್ಚಿನ ವೆಚ್ಚವಿಲ್ಲದೆ ನೀಡುತ್ತಿರುವುದು ಮೆಚ್ಚುವಂತಹ ಕೆಲಸ. ದೇಶದ ಭದ್ರತೆ ಹಾಗೂ ಆರ್ಥಿಕ ಚೇತರಿಕೆಗೆ ತೆಗೆದುಕೊಂಡ ಕ್ರಮಗಳು ಪ್ರಶಂಸಾರ್ಹ. ಬರುವ 'ಪ್ಲವ' ನಾಮ ಸಂವತ್ಸರ 'ವಿಪ್ಲವ' ರಹಿತವಾಗಿ ದೇಶದ ಜನತೆಯ ಆಶೋತ್ತರಗಳು ಈಡೇರಲಿ! "ಆತ್ಮನಿರ್ಭರತೆ" ಯಿಂದ ಬಾಳು ಬೆಳಗಲಿ!

ಕಳೆದ ವರ್ಷ ಓದು–ಬರೆಹ ಪ್ರಿಯರಿಗೆ ಸಣ್ಣಕಥೆ, ಕವನ, ಚುಟುಕು, ಹಾಸ್ಯ, ಗದ್ಯ–ಪದ್ಯ, ಒಗಟು–ಒಗ್ಗರಣೆ ಎಲ್ಲವೂ ಸೀಮಿತಗೊಂಡಿತ್ತು. ಈ ವರ್ಷದಲ್ಲಿ ಏನಾದರೂ ನಿಮ್ಮ ನೆನಪಿನಂಗಳದಲ್ಲಿದ್ದರೆ, ಹೆಕ್ಕಿ ಬರೆದು ನಮ್ಮ ಸಮಾಜದ ಪತ್ರಿಕೆಗಳಿಗೆ ಕಳುಹಿಸಿದಲ್ಲಿ, ಅವರು ಯೋಗ್ಯ ಲೇಖನಗಳನ್ನು ಆರಿಸಿ ಪ್ರಕಟಿಸುವ ಕೃಪೆ ತೋರಲಿ. ನಾವು–ನೀವು ಓದಿ ಮನದಾಳದ ಭಾವನೆಗಳನ್ನು ಹಂಚಿಕೊಳ್ಳೋಣ! ಕೆಲವು ನಮ್ಮ ಸಮಾಜದ ಗೌರವಾನ್ವಿತ ವಯೋವೃದ್ಧರನ್ನು–ಬಂಧುಗಳನ್ನು ಇತ್ತೀಚೆಗಿನ ದಿನಗಳಲ್ಲಿ ಕಳಕೊಂಡಿದ್ದೇವೆ. ಹಿಂದೆಲ್ಲಾ ಮದುವೆ–ಮುಂಜಿ–ಪೂಜಾದಿಗಳು–ಶ್ರಾದ್ಧಾದಿ ಸಂಸ್ಕಾರಗಳಿಗೆ ಮನೆ ಅಥವಾ ಸಭಾಂಗಣಗಳಲ್ಲಿ ಆಮಂತ್ರಿತರೆಲ್ಲಾ ಒಟ್ಟಿಗೆ ಸೇರಿ ಸುಖ–ದುಃಖ ವಿಚಾರಿಸಿ, ಉಂಡು–ತಿಂದು ಅಗಲುತ್ತಿದ್ದೆವು. 'ಕೋವಿಡ್' ಭೂತದಿಂದಾಗಿ ನಮ್ಮ ಅಂತರ ದೂರವಾಯಿತು! ಮುಖತಃ ಭೇಟಿ ಅಪರೂಪವಾಯ್ತು! ಮೊಬೈಲ್ ಮಾತು–ಕತೆಯಲ್ಲಿ ಆತ್ಮೀಯತೆ ಕಾಣದಾಯಿತು. ವಯಸ್ಸಾದ ಹಿರಿಯರು ಒಂದೆಡೆ, ಮಕ್ಕಳು–ಮೊಮ್ಮಕ್ಕಳು ಇನ್ನೊಂದೆಡೆ! ಹೊರಗೆ ನಡೆದಾಡಲು ಕೂಡಾ ಅಡೆತಡೆಗಳು! ವೃದ್ಧರಿಗೆ ಪಾರ್ಕ್, ದೇವಸ್ಥಾನಗಳು ನಿಷಿದ್ಧವಾದವು! ಸ್ನೇಹಿತರ ಸಂಪರ್ಕ ಕಡಿಮೆಯಾಯಿತು. ಅದರಲ್ಲೂ ಮಹಾಮಾರಿ ಖಾಯಿಲೆಗೆ ತುತ್ತಾಗಿ ಚಿಕಿತ್ಸಾಲಯಗಳಿಗೆ ಸೇರಿದವರ ಮುಖದರ್ಶನವೂ ಸಾಧ್ಯವಾಗದೆ ಕುಟುಂಬಸ್ಥರು ಕಣ್ಣೀರು ಸುರಿಸಬೇಕಾಯ್ತು! ಜನತೆ 'ಪ್ರಕೃತಿ' ಮಾತೆಯನ್ನು 'ವಿಕೃತಿ' ಗೊಳಿಸಿದ ತಪ್ಪಿಗೆ ಈ ಶಿಕ್ಷೆ! ಇನ್ನಾದರೂ ಎಚ್ಚರವಾಗೋಣ! ಪರಿಸರ ಸಂರಕ್ಷಿಸೋಣ!!

**ಲೇಖಕ : ಜಿ.ಕೆ.ಕೋಲ್ಪೆ, ಉಡುಪಿ**

–: ಶುಭಾಶಯಗಳು :–



"ಶ್ರೀ ಶಾರದಾಂಬೆಗೆ ವಂದಿಸುತ್ತಾ "ಶ್ರೀ ಶಾರದಾ" ಪತ್ರಿಕೆಯು ನವರಸಭರಿತವಾಗಿ ಸಮಾಜಕ್ಕೆ ದಾರಿದೀಪವಾಗಲಿ" ಎಂದು ಹಾರೈಸುವ

ಜಿ.ಕೆ.ಕೋಲ್ಪೆ, ಉಡುಪಿ

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.




N. Laxmi Prasad



ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Buying and selling shares as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com



ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655



## ಗ್ರಾಮ ಪಂಚಾಯತ್‌ಗಳಿಗೆ ಆಯ್ಕೆ

### ಶ್ರೀ ಕೆ. ಸುದರ್ಶನ್ ರಾವ್



ಕುರ್ಕಾಲು ಗ್ರಾಮ ಪಂಚಾಯತ್‌ಗೆ ನಡೆದ ಚುನಾವಣೆಯಲ್ಲಿ ಬಿ.ಜೆ.ಪಿ. ಬೆಂಬಲಿತ ಅಭ್ಯರ್ಥಿಯಾಗಿ ಶ್ರೀ ಕೆ. ಸುದರ್ಶನ್ ರಾವ್ ಸತತ ಮೂರನೇ ಬಾರಿಗೆ ಆಯ್ಕೆಯಾಗಿದ್ದಾರೆ. ತಮ್ಮ ವಾರ್ಡ್ ಮಾತ್ರವಲ್ಲದೇ ಕುರ್ಕಾಲಿನ ಬೇರೆ ಬೇರೆ ಸಾಮಾಜಿಕ ಅಭಿವೃದ್ಧಿಗೆ ಕಾರಣರಾದ ಇವರು ಕುರ್ಕಾಲಿನ ಏಕೈಕ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಆಟದ ಸಮಯದಲ್ಲಿ ರಸ್ತೆಯ ಕಡೆಗೆ ಓಡಿ ಬರುವುದನ್ನು ಕಂಡು ತಮ್ಮ ಸ್ವಂತ ಖರ್ಚಿನಿಂದ ಶಾಲೆಗೆ ಕಂಪೌಂಡ್ ಗೋಡೆ ಕಟ್ಟಿಸುವಂತಹ ಅನೇಕ ಅನುಕೂಲತೆಗಳನ್ನು ಗ್ರಾಮಸ್ಥರಿಗೆ ಒದಗಿಸಿಕೊಟ್ಟಿದ್ದಾರೆ. ಕುಂಜಾರುಗಿರಿ ಪಾಜಕದ ಶ್ರೀ ಪೇಜಾವರ ಮಠದ ಆಡಳಿತಕ್ಕೊಳಪಟ್ಟ ಶ್ರೀ ಆನಂದ ತೀರ್ಥ ವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರು ಆಗಿರುವ ಶ್ರೀ ಕೆ.ಸುದರ್ಶನ್ ರಾವ್ ಕುಂಜಾರುಗಿರಿಯ ದಿ| ಮಾಧವ ರಾವ್ ಹಾಗೂ ದಿ| ರಂಜನಿ ರಾವ್ ದಂಪತಿಗಳ ಕಿರಿಯ ಪುತ್ರ. ಸುಮಾರು 20 ವರ್ಷಗಳಿಂದ ಸಕ್ರಿಯ ರಾಜಕೀಯದಲ್ಲಿರುವ ಇವರ ಭವಿಷ್ಯ ಉಜ್ವಲವಾಗಲಿ ಎಂದು ಶ್ರೀ ಶಾರದಾ ಅಭಿನಂದನೆಗಳು.

### ಶ್ರೀಮತಿ ಪ್ರೇಮಾ ವೆಂಕಟೇಶ್‌ರಾವ್



ಕಳೆದ ತಿಂಗಳಲ್ಲಿ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಬೆಳ್ಳೆ ಗ್ರಾಮ ಪಂಚಾಯತ್‌ಗೆ ಪಡುಬೆಳ್ಳೆ ವಾರ್ಡ್‌ನಿಂದ ಶ್ರೀಮತಿ ಪ್ರೇಮಾ ವೆಂಕಟೇಶ್‌ರಾವ್ ಬಿ.ಜೆ.ಪಿ. ಬೆಂಬಲಿತ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ. ಪ್ರಥಮ ಬಾರಿಗೆ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಯಶಸ್ವಿಯಾದ ಪ್ರೇಮಾ ವೆಂಕಟೇಶ್‌ರಾವ್ ಪಡುಬೆಳ್ಳೆಯ ಶ್ರೀ ಗೋಪಾಲ್‌ಕೃಷ್ಣ ರಾವ್ ಹಾಗೂ ಶ್ರೀಮತಿ ರತ್ನಮ್ಮ ದಂಪತಿಗಳ ಪುತ್ರರಾದ ಶ್ರೀ ವೆಂಕಟೇಶ್‌ರಾವ್ ರವರ ಧರ್ಮಪತ್ನಿ. ಶ್ರೀಮತಿ ಪ್ರೇಮಾರವರ ಚುನಾವಣಾ ಆಯ್ಕೆಗೆ ಶ್ರೀ ಶಾರದಾ ಅಭಿನಂದನೆಗಳು.



## ಹಿರಿಯ ನಾಗರಿಕ ವೇದಿಕೆಗೆ ಆಯ್ಕೆ

ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್. ರಾವ್ ಅವರು ಉಡುಪಿಯ ಹಿರಿಯ ನಾಗರಿಕ ವೇದಿಕೆಗೆ ಗೌರವ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಅವರಿಗೆ ನಮ್ಮ ಅಭಿನಂದನೆಗಳು. ಅವರು ಈ ಹಿಂದೆಯೂ ಈ ವೇದಿಕೆಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

## ದಿ| ಭಾಸ್ಕರ ರಾವ್ ಕೋಲ್ಪೆ ಶ್ರದ್ಧಾಂಜಲಿಯೊಂದಿಗೆ....



ಪುತ್ತೂರು ತಾಲೂಕಿನ ಕೋಲ್ಪೆ ಕೋಡಂಗೆಯಲ್ಲಿ ಆಯುರ್ವೇದ ಪಂಡಿತ ದಿ| ವೆಂಕಟರಮಣಯ್ಯ/ಭಾಗೀರಥಿಯಮ್ಮ ದಂಪತಿಗಳ ದ್ವಿತೀಯ ಪುತ್ರನಾಗಿ ತಾ. 27.12.1943 ರಂದು ಉದಯಿಸಿ, ಪುತ್ತೂರಿನಲ್ಲಿ ವಿದ್ಯಾಭ್ಯಾಸ ಪೂರೈಸಿ, ಮುಂಬೈ–ಬೆಂಗಳೂರಿನ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಪತ್ನಿ ಸೌ|ಶಾಂತಾ, ಪುತ್ರ ಚಿ| ಪ್ರಶಾಂತ, ಸೊಸೆ ಸೌ|ಗಾಯತ್ರಿ, ಮೊಮ್ಮಗಳು ಕು.ತನುಶ್ರೀಯೊಂದಿಗೆ ಸಂಸಾರವಂದಿಗನಾಗಿ, ನಮ್ಮ ಸಮಾಜಕ್ಕೆ ಮುಖ್ಯವಾಗಿ ಧಾರ್ಮಿಕ ಕೇಂದ್ರಗಳಿಗೆ, ತನ್ನ ಕೈಲಾದ ಕೊಡುಗೆಗಳನ್ನು ಇತ್ತು ಬೆಳಗಿದ ನನ್ನ ತಮ್ಮ "ಕೋಲ್ಪೆ ಭಾಸ್ಕರನು" ದಿನಾಂಕ 20.01.2021 ರಂದು ಬೆಂಗಳೂರಿನಲ್ಲಿ ಅನಾರೋಗ್ಯದಿಂದ ಅಸ್ತಮಿಸಿದನು. ಅಗಲಿದ ದಿವ್ಯ ಚೇತನಕ್ಕೆ ಭಾಷ್ಪಾಂಜಲಿಗಳು!

**ಬೆಂಗಳೂರಲ್ಲಿ ನಡೆದ ಔರ್ಧ್ವ ದೈಹಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸಮಸ್ತ ಬಂಧು–ಬಾಂಧವರಿಗೆ ಕೃತಜ್ಞತೆಗಳನ್ನು ಅರ್ಪಿಸುವ**

**ಜಿ.ಕೆ.ಕೋಲ್ಪೆ, ಉಡುಪಿ.**

## ಮಾರ್ಚ್ ತಿಂಗಳ ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದ ಶಾಶ್ವತ ಸೇವಾಕರ್ತರ ವಿವರ

1. ಬೈಲಕೆರೆ ನಾರಾಯಣ ರಾವ್, ಉಡುಪಿ
2. ಎಚ್.ನಿರಂಜನ ರಾವ್, ಹೆರ್ಗ
3. ರವೀಂದ್ರನಾಥ ಬೆಳ್ಳೆ, ಬೆಂಗಳೂರು
4. ರಾಜ, ಧರ್ಮಸ್ಥಳ
5. ಆರ್.ಪಿ. ಶೆಟ್ಟಿ ಮತ್ತು ಶ್ರೀಮತಿ ಸುಶೀಲಾ ಆರ್. ಶೆಟ್ಟಿ, ಅಂಬಲ್ಪಾಡಿ
6. ಸಿ.ಸುಂದರ ರಾವ್, ಚೊಕ್ಕಾಡಿ
7. ಮಿಸ್ ನಿರ್ಮಲಾ ಶೆಟ್ಟಿಗಾರ್, ಮುಂಬೈ
8. ಮಿಸ್ ಅಮೃತ, ವಾಶಿ
9. ಎ.ದಿವಾಕರ ಶಾಸ್ತ್ರಿ, ಹಿರಿಯಡ್ಕ
10. ಅಮಿತ ಎ.ರಾವ್, ದೊಂಬಿವಿಲ್ಲಿ ಪೂರ್ವ
11. ಕೆ. ಜೀವನ್, ಮೂಡಿಗೆರೆ
12. ಯು.ಜಯಂತ್ ರಾವ್
13. ಸಂದೇಶ್ ಮೋಹನ್ ರಾವ್, ಪುಣೆ
14. ಮಿಸ್ಟರ್ ಸಾತ್ವಿಕ್ ರಾವ್, ಕುಂಜಿಬೆಟ್ಟು
15. ಕೆ.ಉಪೇಂದ್ರ ಭಟ್, ಕುಂಜಿಬೆಟ್ಟು
16. ಗಿರೀಶ್ ರಾವ್, ಮೂಡು ಅಲೆವೂರು
17. ಕುಂಜಾರು ವಿಠಲ ರಾವ್, ಮುಂಬೈ
19. ಮುರಳೀಧರ ರ್‍ರಾವ್, ಕುಂಜಿಬೆಟ್ಟು
20. ಮಿಸ್ ಪ್ರಕೃತಿ ರಾವ್ ಎಂ. ಶೆಟ್ಟಿ, ಬೆಂಗಳೂರು
21. ಮಿಸ್ ಚೇತನ, ಮೂಡು ಅಲೆವೂರು
22. ಸಿದ್ಧಾರ್ಥ್ ಮತ್ತು ನವನೀತ್, ಬನ್ನಂಜೆ
23. ನವನೀತ್, ಬನ್ನಂಜೆ
24. ಕೆ.ಚಂದ್ರಶೇಖರ್ ರಾವ್, ನಾಸಿಕ್
25. ಶ್ರೀಮತಿ ಕೀರ್ತಿ ಗಣೇಶ್ ಎಂ.ರಾವ್, ಕುಂಜಿಬೆಟ್ಟು
26. ಕೆ. ವೆಂಕಟರಮಣ ರಾವ್, ಕುಡಾಲ್
27. ಅರವಿಂದ ಪುರಾಣಿಕ, ಪನ್ವೆಲ್
28. ಅನಿಲ್ ರಾವ್, ಉದ್ಯಾವರ
29. ಶ್ರೀಮತಿ ಜಯಲಕ್ಷ್ಮೀ ಎಮ್. ರಾವ್, ಕುಂಜಿಬೆಟ್ಟು
30. ಪ್ರೇರಣಾ ಎಂ.ರಾವ್, ಚಿಟ್ಪಾಡಿ
31. ಐ.ಕೆ. ಸದಾಶಿವ ರಾವ್, ಚೆನ್ನೈ
32. ಮಿಸ್ ಶೀತಲ್, ಕುದ್ರೋಳಿ
33. ಶ್ರೀಮತಿ ಸರೋಜಿನಿ ಕೆ.ಎನ್. ಕನ್ನಿಗೆ, ಕೊಡಿಯಲ್‌ಬೈಲ್
34. ಮಿಸ್ ಸಿನಿ ಹರಿಲಾಲ, ತ್ರಿಚುರ್
35. ಶ್ರೀ ಮೋಹನ್ ರಾವ್ ಪೆರ್ಡೂರು, ಬೆಂಗಳೂರು
36. ನಯನ ರಾವ್, ಭಯಂದರ್ ಪೂರ್ವ
37. ಶ್ರೀ ಶ್ಯಾಮ್ ರಾವ್ ಮತ್ತು ಶ್ರೀಮತಿ ಸುಜಾತ, ಮಂಗಳೂರು
38. ಪ್ರಣವ್, ಪಟ್ಲ, ಬೆಂಗಳೂರು


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)



ಶುಭಾಶಯಗಳೊಂದಿಗೆ



**ಡಾ| ವಿಜಯಾ ರಾವ್ ವೈ.ಬಿ**
ಎಂ.ಬಿ.ಬಿ.ಎಸ್; ಡಿ.ಜಿ.ಒ.(ಡಿ.ಎನ್.ಬಿ)
ಹೆರಿಗೆ ಹಾಗೂ ಸ್ತ್ರೀರೋಗ ತಜ್ಞರು

ಗಾಂಧಿ ಆಸ್ಪತ್ರೆ ಹಾಗೂ ಸುನಾಗ್ ಆಸ್ಪತ್ರೆ ಉಡುಪಿಯಲ್ಲಿ ಸಂದರ್ಶನಕ್ಕಾಗಿ ಲಭ್ಯ
ಫೋನ್ : 9448164327



With Best Compliments From :

*****Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಸುರತ್ಕಲ್ ಸಂಘದ ವಾರ್ಷಿಕ ಮಹಾಸಭೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್, ಇದರ 8ನೇ ವರ್ಷದ ವಾರ್ಷಿಕ ಮಹಾಸಭೆಯು ತಾ.06.12.2020ನೇ ಭಾನುವಾರ ಘಂಟೆ 2–30ಕ್ಕೆ ಸರಿಯಾಗಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿ ಶಂಕರರಾವ್ ಮಲ್ಲವರಾರು ಇವರ ಮನೆಯಲ್ಲಿ ಜರಗಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಎಂ. ಭವಾನಿ ಶಂಕರ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ. ಯು, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳ ಪ್ರಶಾಂತ್ ಇವರು ಉಪಸ್ಥಿತರಿದ್ದರು. ಕು.ಸಂಜನಾ ಹಾಗೂ ಕು. ಶ್ರೇಯಾ ಇವರು ಪ್ರಾರ್ಥನೆ ಮಾಡಿದರು. ಶ್ರೀ ಕೆ. ಮಾಧವ ರಾಯರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಪಾಲಚಂದ್ರ ಶರ್ಮ ಇವರು ವಾರ್ಷಿಕ ವರದಿಯನ್ನು ಮಂಡಿಸಿ, ಸಭೆಯ ಅನುಮೋದನೆ ಪಡೆದುಕೊಂಡರು. ಶ್ರೀ ರಾಘವೇಂದ್ರ ರಾವ್. ಸಿ. ಇವರು ಲೆಕ್ಕ ಪತ್ರಗಳನ್ನು, ಅಂದಾಜು ಆಯವ್ಯಯವನ್ನು ಮಂಡಿಸಿ ನಂತರ ಅಂಗೀಕಾರಕ್ಕಾಗಿ ಸಭೆಯ ಅನುಮತಿಯನ್ನು ಪಡೆದರು ಹಾಗೂ ಕಾರ್ಯಕ್ರಮವನ್ನು ನಿರೂಪಿಸಿದರು.

ನಂತರ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಬಳಿಕ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗರು ತನ್ನ ತಂದೆ ದಿ.ಶ್ರೀನಿವಾಸ್ ಶಾನುಭಾಗ್ ಮತ್ತು ತಾಯಿ ದಿ.ಕಾವೇರಮ್ಮರವರ ನೆನಪಿಗಾಗಿ ವಿದ್ಯಾನಿಧಿಗೆ ರೂ.1,00,000/– ನೀಡಿರುವುದಕ್ಕಾಗಿ ಅವರನ್ನು ಸನ್ಮಾನಿಸಲಾಯಿತು. ಮಾತ್ರವಲ್ಲದೇ ಸಂಘದ ಇನ್ನೋರ್ವ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಹಾಗೂ ಶ್ರೀಮತಿ ಕಾಂಚನಮಾಲಾ.ಬಿ.ರಾವ್ ಇವರು ವಿದ್ಯಾನಿಧಿಗೆ ದೇಣಿಗೆ ನೀಡಿದುದಕ್ಕಾಗಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ನೂತನವಾಗಿ ವಿವಾಹವಾದ ಸನತ್ ಕುಮಾರ್ ದಂಪತಿಗಳಿಗೆ ಗುಲಾಬಿ ಹೂವನ್ನು ನೀಡಿ ಶುಭಾಶಯಗಳನ್ನು ಸಲ್ಲಿಸಲಾಯಿತು. ನಂತರ ಪುಟಾಣಿಗಳಿಂದ ಎರಡು ನೃತ್ಯಗಳು ಪ್ರದರ್ಶನವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಾಧವ ರಾವ್ ಇವರು ಸಂಘವು ಬೆಳೆದುಬಂದ ರೀತಿ ಹಾಗೂ ವಿದ್ಯಾನಿಧಿಯಿಂದ ಪಡೆದುಕೊಂಡ ವಿದ್ಯಾರ್ಥಿವೇತನದ ವಿದ್ಯಾರ್ಥಿಗಳಿಗೆ ತಾವು ಮುಂದೆ ಉದ್ಯೋಗ ಸೇರಿದ ನಂತರ ವಿದ್ಯಾನಿಧಿಯ ಠೇವಣಿಗೆ ನಿಧಿ ನೀಡಿ ಪ್ರೋತ್ಸಾಹಿಸಬೇಕಾಗಿ ಕೋರಿದರು. ನಂತರ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸುಕುಮಾರ್ ಎಂ.ಯು. ಈ ಸಂಘಕ್ಕೆ ಶಾಶ್ವತ ಕಟ್ಟಡವನ್ನು ರಚಿಸಲು ಪ್ರತ್ಯೇಕವಾಗಿ ಕಟ್ಟಡ ನಿಧಿಗೆ ದೇಣಿಗೆ ನೀಡುವಂತೆ ಕೋರಿದರು ಮತ್ತು ಧನ್ಯವಾದಗಳನ್ನು ಅರ್ಪಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆಯರಾದ ಶ್ರೀಮತಿ ಪರಿಮಳ ಇವರು ಮಹಿಳಾ ವೇದಿಕೆಯನ್ನು ಬಲಸಡಿಸಲು ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಆಗಮಿಸಿದ ಎಲ್ಲಾ ಸದಸ್ಯರಿಗೆ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.



ಪಡುಬಿದ್ರಿ ಬಾಲಗಣಪತಿ ದೇವಸ್ಥಾನಕ್ಕೆ ನೂತನ ಪುಷ್ಪಕವಿಮಾನಕ್ಕಾಗಿ ವೃಕ್ಷಪೂಜೆ

## ಶ್ರೀಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ನಿ.)

**ಭೂವರಾಹ ಸಂಕೀರ್ಣ ವಾದಿರಾಜ ರಸ್ತೆ, ಉಡುಪಿ–576101. ಫೋನ್ : 0820–2522408**

### ಪ್ರಕಟಣೆ

ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ನಿ.) ಉಡುಪಿ ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ಪ್ರಧಾನ ಕಛೇರಿ ಇರುವ ಭೂವರಾಹ ಸಂಕೀರ್ಣದ ಸಭಾಂಗಣ ಇದರಲ್ಲಿ ದಿನಾಂಕ 28.02.2021 ರಂದು ಪೂರ್ವಾಹ್ನ ಗಂಟೆ 9.00 ರಿಂದ ಅಪರಾಹ್ನ ಗಂಟೆ 4.00 ರವರೆಗೆ ಚುನಾವಣೆ ಜರುಗಲಿದ್ದು ಸ್ಪರ್ಧಿಸಲು ಇಚ್ಛಿಸುವ ಸಂಘದ ಅರ್ಹ ಸದಸ್ಯರು ತಮ್ಮ ನಾಮಪತ್ರವನ್ನು ಸಂಘದ ಪ್ರಧಾನ ಕಛೇರಿಯಲ್ಲಿ ಪಡೆದು ದಿನಾಂಕ 12.02.2021 ರಿಂದ ದಿನಾಂಕ 20.02.2021 ರವರೆಗೆ ಪೂರ್ವಾಹ್ನ ಗಂಟೆ 11.00 ರಿಂದ ಮದ್ಯಾಹ್ನ 2.00 ಗಂಟೆಯ ಒಳಗಾಗಿ ಸಂಘದ ಪ್ರಧಾನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರೆಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸತಕ್ಕದ್ದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೇಳಾಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಹಿ/–

ಸ್ಥಳ : ಉಡುಪಿ
ದಿನಾಂಕ : 09.02.2021

**ಅರುಣ್ ಕುಮಾರ್ ಎಸ್.ವಿ.**
ರಿಟರ್ನಿಂಗ್ ಅಧಿಕಾರಿ, ಶ್ರೀ ಶಾರದಾ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ನಿ.) ಉಡುಪಿ
ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಕಾರ್ಕಳ


## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | |
|---|---|
| ಗೃಹ ಸಾಲ | : 10% |
| ವಾಹನ ಸಾಲ | : 12.5% |
| ಹಳೆಯ ವಾಹನ | : 14% |
| ಆಭರಣ ಸಾಲ | : 11.5% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 11% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)








Owned, Published & Edited by : Sri Y. Muralikrishna Rao onbehalf of Sri Sthanika Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org